## ಮಂಕಾದ ಪ್ರಜ್ಞೆ!

ಕ್ಯಾಂಡಿಡೇಟ್ಸ್ ಟೂರ್ನಿ ಆರಂಭಕ್ಕೆ ಮೊದಲು ಭಾರತೀಯ ಆಟಗಾರರ ಪೈಕಿ ಹೆಚ್ಚು ಜನಪ್ರಿಯತೆ ಗಳಿಸಿದ್ದುದು ಪ್ರಜ್ಞಾನಂದ. ಗುಕೇಶ್‌ಗಿಂತಲೂ ಒಂದು ವರ್ಷವಷ್ಟೇ ಹಿರಿಯವನಾದ ಈತ ಚೆಸ್‌ಪ್ರಿಯರ ಪಾಲಿನ ನೆಚ್ಚಿನ 'ಪ್ರಗ್ಗು'. ಕಳೆದ ವರ್ಷ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಚದುರಂಗದ ಕಣದಲ್ಲಿ ಘಟಾನುಘಟಿಗಳನ್ನೆಲ್ಲ ಚಿತ್ ಮಾಡಿ, ಎರಡನೆಯವನಾಗುವ ಮೂಲಕ ಬೆಳ್ಳಿಚುಕ್ಕಿಯಂತೆ ಮಿನುಗುತ್ತಿದ್ದ ಆಟಗಾರನೀತ.

ಇತ್ತೀಚಿನ ದಿನಗಳಲ್ಲಿ ಗುಕೇಶ್ ಫಾರ್ಮ್ ಕೊಂಚ ಹೊಳಪು ಕಳೆದುಕೊಂಡಿದ್ದು ಕೂಡ ಪ್ರಗ್ಗು ಪ್ರಭಾವಳಿ ಪ್ರಖರಗೊಳ್ಳಲು ಕಾರಣವಾಗಿತ್ತು. ಆದರೆ, ಟೊರಾಂಟೊದಲ್ಲಿ ಆದುದೇ ಬೇರೆ. ಎರಡನೇ ಸುತ್ತಿನಲ್ಲೇ ಗೆಳೆಯರು ಎದುರಾಗಬೇಕಾಯಿತು. ಎಲ್ಲರ ಎಣಿಕೆಯನ್ನು ಮೀರಿ ಗುಕೇಶ್ ಗೆಳೆಯನಿಗೆ ಸೋಲುಣಿಸಿದರು. ಆ ಆಘಾತದಿಂದ ಪ್ರಗ್ಗು ಬೇಗನೆ ಚೇತರಿಸಿಕೊಂಡರಾದರೂ, ಟೂರ್ನಿಯಲ್ಲಿ ಒಮ್ಮೆಯೂ ಮುನ್ನಡೆ ಪಡೆಯುವುದು ಅವರಿಗೆ ಸಾಧ್ಯವಾಗಲಿಲ್ಲ. ಎರಡನೇ ಸುತ್ತಿನ ನಿರ್ಣಾಯಕ ಪಂದ್ಯಗಳಲ್ಲಿ ಫ್ಯಾಬಿಯಾನೊ ಕರುವಾನಾ ಹಾಗೂ ಹಿಕಾರು ನಕಾಮುರಾ ಅವರ ಎದುರಿನ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದು ಪಂದ್ಯಾವಳಿಯನ್ನು ಗೆದ್ದುಕೊಳ್ಳುವ ಕನಸನ್ನು ಭಗ್ನಗೊಳಿಸಿತು.

ಮೂರು ಸೋಲುಂಡರೂ ಟೊರಾಂಟೊದಲ್ಲಿ ಪ್ರಜ್ಞಾನಂದನ ಸಾಧನೆ ಕಳಪೆಯೇನೂ ಆಗಿರಲಿಲ್ಲ. ಟೂರ್ನಮೆಂಟ್‌ನ ಪೂರ್ವಾರ್ಧದಲ್ಲಿ ಅವರು ಎರಡನೇ ಸ್ಥಾನದಲ್ಲಿದ್ದರು ಹಾಗೂ ಯಾವಾಗ ಬೇಕಾದರೂ ಮುನ್ನಡೆ ಗಳಿಸುವ ವಿಶ್ವಾಸ ಮೂಡಿಸಿದ್ದರು. ಆದರೆ, ಎರಡನೇ ಭಾಗದಲ್ಲಿ ಅವರು ಅನಿರೀಕ್ಷಿತ ಹಿನ್ನಡೆ ಅನುಭವಿಸಿದರು. ಹದಿನಾಲ್ಕು ಸುತ್ತುಗಳ ಕೊನೆಗೆ, ಏಳು ಅಂಕಗಳೊಂದಿಗೆ ಪಂದ್ಯಾವಳಿಯ ಎಂಟು ಆಟಗಾರರಲ್ಲಿ ಐದನೆಯವರೆನಿಸಿದರು. ಮೊದಲ ಸುತ್ತಿನಲ್ಲಿ ಪ್ರಗ್ಗು ಆಕ್ರಮಣಕಾರಿ ಆಟ ಚೆಸ್ ಪಂಡಿತರನ್ನು ಬೆರಗುಗೊಳಿಸುವಂತಿತ್ತು. ವಿದಿತ್ ಗುಜರಾತಿ ವಿರುದ್ಧದ ಗೆಲುವಿನ ಪಂದ್ಯದಲ್ಲಿನ ಅವರ ಓಪನಿಂಗ್ ಚೆಸ್ ಮೀಮಾಂಸೆಯಲ್ಲಿ ತೀರಾ ಅಪರೂಪದ್ದು ಎನ್ನುವ ಅಚ್ಚರಿಯ ವಿಶ್ಲೇಷಣೆಗೆ ಕಾರಣವಾಯಿತು.



ಪಂದ್ಯಾವಳಿ ಗೆಲ್ಲದೆ ಹೋದರೂ ಭಾರತೀಯರ ಮನಸು ಗೆದ್ದಿರುವ ಪ್ರಜ್ಞಾನಂದ



ಆಗಸ್ಟ್ 2022ರಲ್ಲಿ ಚೆನ್ನೈನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲಿ ಭಾಗಿಯಾದ 'ಭಾರತ ಬಿ' ತಂಡದ ಪ್ರಚಂಡರು: ರಮೇಶ್‌ಬಾಬು ಪ್ರಜ್ಞಾನಂದ, ಅಧಿಬನ್ ಭಾಸ್ಕರನ್, ಡಿ. ಗುಕೇಶ್ ಹಾಗೂ ನಿಹಾಲ್ ಸರಿನ್

ಫಿಡೆ ಸರ್ಕಿಟ್ ಟೂರ್ನಿಯಲ್ಲಿ ಕರುವಾನಾ ಮೊದಲ ಸ್ಥಾನ, ಗುಕೇಶ್‌ಗೆ ಎರಡನೇ ಸ್ಥಾನ ದೊರೆತಿತ್ತು. ಆದರೆ, ವಿಶ್ವಕಪ್ ಮೂಲಕ (3ನೇ ಸ್ಥಾನ ಪಡೆದಿದ್ದರು) ಅಮೆರಿಕದ ಆಟಗಾರ ಅದಕ್ಕೆ ಮೊದಲೇ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿದ್ದ ಕಾರಣ, ಗುಕೇಶ್‌ಗೆ ಕ್ಯಾಂಡಿಡೇಟ್ಸ್‌ಗೆ ಅವಕಾಶ ದೊರೆಯಿತು. ಅದೃಷ್ಟ ಗುಕೇಶ್ ಪಾಲಿಗಿತ್ತೆನ್ನಿ. ಅದೃಷ್ಟ ಮಾತ್ರವಲ್ಲ, ಪ್ರತಿಭೆಯಲ್ಲಿ ನಾನೇನೂ ಕಡಿಮೆಯಿಲ್ಲ ಎನ್ನುವುದನ್ನು ಗುಕೇಶ್ ಟೊರಾಂಟೊದಲ್ಲಿ ಸಾಧಿಸಿ ತೋರಿಸಿದರು.

### ಭಾರತದ ಚೆಸ್ ಭರವಸೆ

ಕಳೆದ ದಶಕದ ಮಧ್ಯದಲ್ಲಿ ಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದ ಚೆಸ್ ತಾರೆಗಳಲ್ಲಿ ಪ್ರಜ್ಞಾನಂದ, ನಿಹಾಲ್ ಸರಿನ್, ಅರ್ಜುನ್ ಇರಿಗೇಶಿ, ಗುಕೇಶ್ ಪ್ರಮುಖರು. ಅದರಲ್ಲೂ ವಿಶೇಷವಾಗಿ ಪ್ರಜ್ಞಾನಂದ ಮತ್ತು ಗುಕೇಶ್ ಅವರನ್ನು 'ಭವಿಷ್ಯದ ಚಾಂಪಿಯನ್‌ಗಳು' ಎಂದೇ ಗುರುತಿಸಲಾಗುತ್ತಿದೆ.

ಭಾರತದಲ್ಲಿ 37 ವರ್ಷಗಳ ಕಾಲ ಅಗ್ರ ಆಟಗಾರನಾಗಿ ಮೆರೆದ ಆನಂದ್ ಅವರು ಕಳೆದ ಐದು ತಿಂಗಳಲ್ಲಿ ಮೂರು ಬಾರಿ ಆ ಪಟ್ಟ ಕಳೆದುಕೊಂಡಿದ್ದರು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಪ್ರಕಟವಾದ ಫಿಡೆ ರ‍್ಯಾಂಕಿಂಗ್‌ನಲ್ಲಿ ಗುಕೇಶ್ ಎಂಟನೇ ಸ್ಥಾನಕ್ಕೇರಿ ಮೊದಲ ಸಲ ಆನಂದ್ ಅವರನ್ನು ಹಿಂದೆಹಾಕಿದ್ದರು. ಈ ವರ್ಷದ ಜನವರಿ ಮಧ್ಯದಲ್ಲಿ ಪ್ರಜ್ಞಾನಂದ ಅವರು ಲೈವ್ ರೇಟಿಂಗ್‌ನಲ್ಲಿ (ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ರೇಟಿಂಗ್ ಹೆಚ್ಚು ಆಗುವ ಸಂದರ್ಭ) ಆನಂದ್ ಅವರನ್ನು ಹಿಂದೆಹಾಕಿದ್ದರು. ಪ್ರಸ್ತುತ ಫಿಡೆ ಕ್ರಮಾಂಕದಲ್ಲಿ ಅರ್ಜುನ್ (2756) ಅವರು ಆನಂದ್ (2751) ಅವರನ್ನು ಹಿಂದೆಹಾಕಿದ್ದಾರೆ. ಕ್ಯಾಂಡಿಡೇಟ್ಸ್‌ನಲ್ಲಿ ಗೆಲ್ಲುವ ಮೂಲಕ ಗುಕೇಶ್ ಈಗ ತಮ್ಮ ಗೆಳೆಯರೆಲ್ಲರನ್ನೂ ರೇಟಿಂಗ್‌ನಲ್ಲಿ ಹಿಂದಿಕ್ಕಿದ್ದಾರೆ.